ಒ. ಎಸ್. ನಂ.247 /2019

ಪಿಡಬ್ಲೂ-1

ದಿನಾಂಕಃ 24.09.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲು :- ಶ್ರೀ. ಪ್ರತಿವಾದಿ ಪರ ವಕೀಲರಿಂದಃ-**

ನಾನು ಮೂಲತಃ ಮೈಸೂರು ತಾಲ್ಲೂಕು ಗೋಪಾಲಪುರ ಗ್ರಾಮದವರು. ನಾನು ವ್ಯವಸಾಯ ಮಾಡುತ್ತೇನೆ. ನಾನು ಡಿಗ್ರಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಗೋಪಾಲಪುರದಲ್ಲಿ ಜಮೀನು ಇರುತ್ತದೆ. ಪ್ರತಿವಾದಿ 1 ರವರ ಕುಟುಂಬವನ್ನು ಹೊರತುಪಡಿಸಿ ದಾವಾ ಐಟಂ ನಂ 2 ಅನ್ನು ಮಾರಾಟ ಮಾಡಿರುವ ಪ್ರತಿವಾದಿ 4 ರಿಂದ 8 ರವರ ವಿರುದ್ದ ದಾವೆ ಹೂಡಿರುತ್ತೇವೆ. ಪ್ರತಿವಾದಿ 1 ರಿಂದ 3 ಮತ್ತು ಪ್ರತಿವಾದಿ 4 ರಿಂದ 8 ರವರ ಕುಟುಂಬಗಳು ಬೇರೆ ಬೇರೆ ಎಂದರೆ ಸರಿ. ಪ್ರತಿವಾದಿ 5, 7 ಮತ್ತು 8 ರವರು ಬೇರೆ ಬೇರೆ ಗ್ರಾಮದವರು ಎಂದರೆ ಸರಿ. ದಾವಾ ಐಟಂ ನಂ 1 ಮತ್ತು 2 ಮೂಲ ಹೇಗೆ ಬಂತು ಎಂದರೆ ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ದಿನಾಂಕ 06.05.2009 ರಲ್ಲಿ ದಾವಾ ಐಟಂ ನಂ 1 ಮತ್ತು ದಿನಾಂಕ 21.01.2015 ರಲ್ಲಿ ದಾವಾ ಐಟಂ ನಂ 2 ಅನ್ನು ಖರೀದಿ ಮಾಡಿರುತ್ತೇನೆ. ದಾವಾ ಸ್ವತ್ತುಗಳನ್ನು ಖರೀದಿಸುವ ಮುನ್ನ ಐರಿಗೆ ಗ್ರಾಮದಲ್ಲಿ ನನಗೆ ಸೇರಿದ ಯಾವುದೇ ಆಸ್ತಿಗಳು ಇರಲಿಲ್ಲ ಎಂದರೆ ಸರಿ. ದಾವಾಸ್ತಿಯನ್ನು ಖರೀದಿ ಮಾಡುವ ಮುನ್ನ ಅಂಕನಾಯಕನ ಹೆಂಡತಿ ಚಲುವಮ್ಮ 1 ನೇ ಪ್ರತಿವಾದಿ ಮಾದೇಗೌಡ ಬೋರೆಗೌಡರ ಮಗ ವರಸಿಂಗೇಗೌಡ ಗೊತ್ತಿತ್ತು ಎಂದರೆ ಸರಿ. ಎಷ್ಟು ವರ್ಷಗಳಿಂದ ಪರಿಚಯ ವಿರುತ್ತಾರೆ ಎಂದರೆ ದಾವಾಸ್ತಿಯನ್ನು ಖರೀದಿಸುವ ಸಮಯದಲ್ಲಿ ಪರಿಚಯ ವಿರುತ್ತಾರೆ. ಆಸ್ತಿಯನ್ನು ಖರೀದಿಸುವ ಮುನ್ನ ಹೈರಿಗೆ ಗ್ರಾಮದ ಗ್ರಾಮದವರಿಗೆ ಬಡ್ಡಿ ಹಣಕ್ಕಾಗಿ ಸಾಲ ನೀಡುತ್ತಿದ್ದೆ ಎಂದರೆ ಸರಿಯಲ್ಲ. ಅದೇ ಗ್ರಾಮದ ವರಸಿಂಗೇಗೌಡ ರವರಿಗೆ ಹಣ ಕೊಟ್ಟು ಬಡ್ಡಿ ವ್ಯವಹಾರ ಮಾಡಿ ನಂತರ ಜಮೀನು ಅನ್ನು ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವರಸಿಂಗೇಗೌಡರ ಜಮೀನು ಅನ್ನು ಯಾವ ವರ್ಷ ಆಧಾರ ಮಾಡಿಕೊಂಡಿದ್ದೀರಿ ಎಂದರೆ ದಿನಾಂಕ ನೆನಪಿಲ್ಲ. ದಾವಾಸ್ತಿಗಳನ್ನು ಖರೀದಿಸುವ 6 ತಿಂಗಳ ಹಿಂದೆ ವರಸಿಂಗೇಗೌಡರವರಿಂದ ಜಮೀನು ಖರೀದಿಸಿದ್ದೆ.

2015 ರಲ್ಲಿ ದಾವಾ ಐಟಂ ನಂ 1 ಅನ್ನು ಪ್ರತಿವಾದಿ 4 ರವರಿಂದ ಕ್ರಯ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ವರ ಸಿಂಗೇಗೌಡರ ಜಮೀನು ಅನ್ನು ಯಾವಾಗ ವಾಪಸ್ಸು ಕ್ರಯ ಮಾಡಿಕೊಟ್ಟಿರುತ್ತೀರಾ ಎಂದರೆ ಅದು ಯೋಗ್ಯವಿಲ್ಲ ಎಂದು ಅವರೇ ವಾಪಸ್ ಖರೀದಿ ಮಾಡಿರುತ್ತಾರೆ. ಖರೀದಿ ಮಾಡಿದ ವರ್ಷವೇ ವಾಪಸ್ ಕ್ರಯ ಮಾಡಿಕೊಟ್ಟಿರುತ್ತೇನೆ ಎಂದರೆ ದಿನಾಂಕ ನೆನೆಪಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ 1 ಮತ್ತು 4 ರವರ ಜಮೀನನ್ನು ವರಸಿಂಗೇಗೌಡರ ಬಳಿ ಅಡಮಾನ ಇಟ್ಟು ನಾನು ಮಧ್ಯವರ್ತಿಯಾಗಿ ಹಣ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂ 1 ಮತ್ತು ದಾವಾ ಐಟಂ ನಂ 2 ಅನ್ನು ನಾನು ಖರೀದಿ ಮಾಡಿದ ದಿನದಿಂದ ಪ್ರತಿವಾದಿ 1 ರಿಂದ 8 ರವರೇ ಸ್ವಾದೀನ ಇದ್ದು ಬೆಳೆ ಬೆಳೆಯುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ 1 ರಿಂದ 8 ರವರ ಮೇಲೆ ನಾನು 4 ರಿಂದ 5 ಬಾರಿ ಹೆಚ್.ಡಿ. ಕೋಟೆ ಠಾಣೆಯಲ್ಲಿ ಸ್ವಾಧೀನ ಬಿಡುತ್ತಿಲ್ಲ ಎಂದು ದೂರು ಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ನನ್ನ ಸ್ವಾಧೀನಕ್ಕೆ ತೊಂದರೆ ಕೊಟ್ಟಿರುತ್ತಾರೆ ಎಂದು ದೂರು ಕೊಟ್ಟಿರುತ್ತೇನೆ. ಪ್ರತಿವಾದಿಗಳು ಸುಮಾರು 4 ರಿಂದ 5 ಬಾರಿ ನನ್ನ ವಿರುದ್ಧ ಠಾಣೆಯಲ್ಲಿ ದೂರು ಕೊಟ್ಟಿರುತ್ತಾರೆ ಎಂದರೆ ನಾನೇ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.

ದಾವಾ ಐಟಂ ನಂ 1 ರ ಚಕ್ಕುಬಂಧಿ ಪೂರ್ವಕ್ಕೆ ನನ್ನದೆ ಸರ್ವೆ ನಂಬರ್ 21/3, ಪಶ್ಚಿಮಕ್ಕೆ ಪ್ರತಿವಾದಿ 1, ಉತ್ತರಕ್ಕೆ ಬಸವೇಗೌಡ ಮತ್ತು ದಕ್ಷಿಣಕ್ಕೆ ಜವರಮ್ಮ. ದಾವಾ ಐಟಂ ನಂ 2 ರ ಚಕ್ಕುಬಂಧಿ ಪೂರ್ವಕ್ಕೆ ಗಿರಿನಾಯಕ, ಪಶ್ಚಿಮಕ್ಕೆ ನನ್ನದೇ ಜಮೀನು, ಉತ್ತರಕ್ಕೆ ಸಣ್ಣೇಗೌಡ ಮತ್ತು ದಕ್ಷಿಣಕ್ಕೆ ಮಾದೇಗೌಡ. ಸರ್ವೆ ನಂಬರ್ 21 ರಲ್ಲಿ ಒಟ್ಟು ಎಷ್ಟು ಎಕರೆ ವಿಸ್ತೀರ್ಣ ಇತ್ತು ಎಂದು ನೆನಪಿಲ್ಲ. 2020 ರಲ್ಲಿ ಪ್ರತಿವಾದಿಗಳು ದಾವಾ ಐಟಂ 2 ರಲ್ಲಿ ಶುಂಠಿ ಬೆಳೆ ಬಳೆದಿದ್ದು ಅದನ್ನು ತೆಗೆಯುವ ಸಮಯದಲ್ಲಿ ನಾನು ತೊಂದರೆ ಕೊಟ್ಟಿದ್ದಕ್ಕೆ ದೂರು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 1 ರವರ ತಂಗಿ ಅ. ದ ನಂ 210/2019 ರಂತೆ ಭಾಗಂಶ ಕೋರಿ ಪ್ರತಿವಾದಿ 1 ರವರ ವಿರುದ್ಧ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ ಮುಂದುವರಿದು ಪ್ರತಿವಾದಿ ಕೇಳಿ ಹಾಕಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ನಾನು ಕೂಡ ಪಕ್ಷಗಾರನಾಗಿರುತ್ತೇನೆ ಎಂದರೆ ಸರಿ. ಪ್ರತಿವಾದಿ 1 ರವರು ನನ್ನ ವಿರುದ್ಧ ಅದಾ ನಂ 70/19 ರಂತೆ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. 4, 5 ಮತ್ತು 7 ನೇ ಪ್ರತಿವಾದಿಗಳು ಅದಾ ನಂ 137/2019 ರಂತೆ ಭಾಗಾಂಶ ಕೋರಿ ದಾವೆ ಸಲ್ಲಿಸಿದ್ದು ಅದರಲ್ಲಿ ನಾನು ಪಕ್ಷಗಾರನಾಗಿರುತ್ತೇನೆ ಎಂದರೆ ಸರಿ.

**<u>ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ನೀಡಲಾಯಿತು.</u>**

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ